# ಏಳಯ್ಯ ಶ್ರೀಹರಿ ಬೆಳಗಾಯಿತು

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Note:** Singer has mostly followed these lyrics except few which are marked in yellow highlights.

ರಾಗ: ಬಿಲಹರಿ ತಾಳ: ಅಟ

ಏಳಯ್ಯ ಶ್ರೀಹರಿ ಬೆಳಗಾಯಿತು || ಪ ||

ಏಳು ದೇವಕಿ ತನಯ ನಂದನ ಕಂದ
ಏಳು ಗೋವರ್ಧನ ಗೋವಳ ರಾಯ
ಏಳು ಮಂದರಧರ ಗೋವಿಂದ ಫಣಿಶಾಯಿ
ಏಳಯ್ಯ ನಲಿದು ಉಪ್ಪವಡಿಸಯ್ಯ || 1 ||

(ಧೀರ) ಕ್ಷೀರಸಾಗರವಾಸ ಬೆಳಗಾಯಿತೇಳು
ಮೂರು (ಲೋಕದರಸು) (ಲೋಕಗಳ) ಒಡೆಯ ಲಕ್ಷ್ಮೀಪತಿಯೆ
ವಾರಿಜನಾಭನೆ ದೇವ ದೇವೇಶನೆ (ನೀನು)
ಈರೇಳು ಲೋಕಕಾಧಾರ ಶ್ರೀ ಹರಿಯೇ || 2 ||

ಸುರರು ದೇವತೆಗಳು ಅವಧಾನ ಎನುತಿರೆ (ಸುರರು ಮುನಿಗಳು ಕೂಡಿ ಅವಧಾನವೆನುತಿರಲು)
ಸುರ ವನಿತೆಯರೆಲ್ಲ ಆರತಿ ಪಿಡಿದಿರೆ (ಸುರ ವನಿತೆಯರೆಲ್ಲ ನೆರೆದು ಆರತಿ ಪಿಡಿದಿರಲು)
ನೆರೆದು ಊರ್ವಶಿ ಭರದಿ ನಾಟ್ಯ ಮಾಡಲು (ಭರದಿ ಊರ್ವಶಿ ರಂಭೆಯರು ನಾಟ್ಯವಾಡುತಿರಲು)
ಕರುಣಿಸೊ ಪುರಂದರ ವಿಠಲ ನೀನೇಳೋ (ಕರುಣಿಸೊ ಪುರಂದರ ವಿಠಲ ನೀನೇಳು) || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಉಪ್ಪವಡಿಸು** = ಎಬ್ಬಿಸು, ಹಾಸಿಗೆಯಿಂದ ಎದ್ದೇಳು

**ಊರ್ವಶಿ =** ಸ್ವರ್ಗ ಲೋಕದ ಅಪ್ಸರೆ.  ನಾರಾಯಣ ಋಷಿಯ ತೊಡೆಯಿಂದ ಹುಟ್ಟಿದವಳು. ಇವಳು ಅತಿ ಚೆಲುವೆ.  ಇವಳು ಋಗ್ವೇದದ ಕಾಲದಿಂದಲೂ ಪ್ರಸಿದ್ಧಳಾಗಿದ್ದಾಳೆ.

**Classification:** Keerthane
**Ankita:** purandara vittala
**Location:** NA
**Category:** Udaya Geete, Krishna Stuti
**Sub-Category:** Vishnu, Krishna, udaya, sura, muni, arati, karuna, halu, Samudra, beligge, loka, lakshmi, deva, govinda, Devaki,
**Pravachana:** NA
**Explanation:** NA